ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದಃ-

ಈ ಕೇಸಿನಲ್ಲಿ ವಾದಿ ಕೇಳಿರುವ ಪರಿಹಾರದ ಬಗ್ಗೆ ನನಗೆ ಗ್ತೊತ್ತು. ವಾದಿ ವೆಂಕಟಮ್ಮನವರು ಅರಳಾಳುಸಂದ್ರ ಗ್ರಾಮದವರು ಎಂದರೆ ಸರಿ. ಅರಳಾಳುಸಂದ್ರ ಗ್ರಾಮದ ತಿಮ್ಮಯ್ಯ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಯ್ಯನವ ಮಗ ವೆಂಕಗಿರಿಯಪ್ಪ ನನಗೆ ಗೊತ್ತಿಲ್ಲ. ಗೋವಿಂದಪ್ಪನವರು ನನಗೆ ಗೊತ್ತಿಲ್ಲ. ವಾದಿ ವೆಂಕಟಮ್ಮು ನವರು ಗೋವಿಂದಪ್ಪನವರನ್ನು ಮದುವೆಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಅರಳಾಳುಸಂದ್ರ ಗ್ರಾಮದಲ್ಲಿ ವಾಸವಿರುತ್ತೇನೆ. ತಿಮ್ಮಯ್ಯ ಮಗ ವೆಂಕಗಿರಿಯಪ್ಪನವರು 7 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ವಾದಿ ತಂದೆ ತಿಮ್ಮಯ್ಯನವರು 1982ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ.

ವಾದಿ ತಂದೆ ತಿಮ್ಮಯ್ಯನವರು ಸರ್ವೇ ನಂಬರ್ 32ರಲ್ಲಿ 1 ಎಕರೆ 14 ಗುಂಟೆ ಮತ್ತು ಮತ್ತೊಂದು ಜಮೀನುಗಳನ್ನು ದಿನಾಂಕ 28.10.1954ರಂದು ವಾದಿ ತಂದೆ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯ ಪತ್ರ ನೋಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೂಲ ಸರ್ವೇ ನಂಬರ್ 32ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತಿತ್ತಿಲ್ಲ. ಮೂಲ ಸರ್ವೇ ನಂಬರ್ 32ರಲ್ಲಿ 9 ಎಕರೆ 31 ಗುಂಟೆ 15 ಗುಂಟೆ ಖರಾಬು ಇದೆ ಎಂದರೆ ನನಗೆ ಗೊತ್ತಿಲ್ಲ. 9 ಎಕರೆ 31 ಗುಂಟೆಯ ಮೂಲ ಮಾಲೀಕರು ತಿಮ್ಮಯ್ಯನವರಿಗೆ 1 ಎಕರೆ 14 ಗುಂಟೆ ಮಾರಾಟ ಮಾಡಿದ್ದು ಆ ಬಗ್ಗೆ ಖಾತೆ ಸಹ ಆಗಿದೆ ಎಂದರೆ ನನಗೆ ಗೊತ್ತಿಲ್ಲ, ತಿಮ್ಮಯ್ಯನವರ ಹೆಸರಿನಲ್ಲಿ ಆ ಬಗ್ಗೆ ಕಂದಾಯ ದಾಖಲೆಗಳು ಸಹ ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ.

ತಿಮ್ಮಯ್ಯನವರು ತೀರಿಕೊಂಡ ನಂತರ ಅವರ ಗಂಡು ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಯ್ಯನವರು ತೀರಿಕೊಳ್ಳುವ ಮೊದಲೇ ಸರ್ವೇ ನಂಬರ್ 32/2ರಂತೆ ಪೋಡಿ ಸಹ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಸರ್ವೇ ನಂಬರ್ 32/2ರಲ್ಲಿ 1 ಎಕರೆ 14 ಗುಂಟೆ ಸ್ವತ್ತಿನ ತಲಾ ಅರ್ಧ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಹಾಜರುಪಡಿಸಿರುವ ದಾಖಲೆ ನೋಡಿರುತ್ತೇನೆ.

ಎಂ.ಆರ್ 2/1989-90ರಂತೆ ವಿಭಾಗ ಪತ್ರದ ಪ್ರಕಾರ ಖಾತೆ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಖಾತೆಯಾಗಿರುವ ಬಗ್ಗೆ ವಾದಿ ದಾಖಲೆ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, 1989-90 ರಿಂದ 1993-94ರವರಗೆ ಪಹಣಿ ಪತ್ರಿಕೆಯ ಅವರ ಹೆಸರಿಗೆ ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಯ್ಯನವರ ಗಂಡು ಮಕ್ಕಳು ವಿಭಾಗ ಮಾಡಿಕೊಂಡಾಗಿನಿಂದಲೂ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸುಳ್ಳು. ತಿಮ್ಮಯ್ಯನವರು ಖರೀದಿಸಿದ ದಿನದಂತೆ ಕಾಳಮ್ಮನವರು ಸಹ ಒಂದು ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿ. ವಾದಿರವರು ಈ ದಾವೆಯನ್ನು ಸಲ್ಲಿಸುವ 25 ವರ್ಷಗಳ ಮೊದಲಿನಿಂದಲೂ ದಾವಾ ಆಸ್ತಿಯ ಸ್ವಾಧೀನಾನುಭದಲ್ಲಿ ಇದ್ದಾರೆ ಎಂದರೆ ಸುಳ್ಳು.

ವಾದಿರವರು ತಮ್ಮ ಜೀವಕ್ಕೆ ತೊಂದರೆ ಉಂಟಾದ ಕಾರಣ ಅವರ ಮೈದುನರವರಿಗೆ ಮಾರಾಟ ಮಾಡುತ್ತೇವೆ ಎಂದು ಹಣ ಕೊಟ್ಟ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ, ಸರ್ವೇ ನಂಬರ್ 32ರ 1 ಎಕರೆ 14 ಗುಂಟೆ ಪೈಕಿ 27 ಗುಂಟೆ ಗೋವಿಂದಪ್ಪನವರಿಗೆ ಸೇರಿದೆ ಎಂದರೆ ಸರಿಯಲ್ಲ. ವಾದಿ

ಕುಟುಂಬಕ್ಕೂ ಮತ್ತು ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ತಿಮ್ಮಯ್ಯನವರ ಖರೀದಿಸಿರುವ ಸರ್ವೇ ನಂಬರ್ 32ರ 1 ಎಕರೆ 14 ಗುಂಟೆ ಸ್ವತ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಕೊಂಡುಕೊಂಡಿರುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಖರೀದಿಸಿ ಸುಮಾರು 70 ವರ್ಷ ಆಗಿದೆ. ನನ್ನ ಅಜ್ಜಿಯ ಹೆಸರು ಕಾಳಮ್ಮ. ನನ್ನ ಅಜ್ಜಿ ದಾವಾ ಆಸ್ತಿಯನ್ನು ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸೇರಿಸಿದ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಕಂದಾಯ ಅಧಿಕಾರ ಜೊತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

19996ಕ್ಕೂ ಮೊದಲು ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ. ಸರ್ವೇ ನಂಬರ್ 32/2ರಲ್ಲಿ 27 ಗುಂಟೆ ಸ್ವತ್ತಿಗೆ ಗೋವಿಂದಪ್ಪನವರ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸುಳ್ಳು. ಗೋವಿಂದಪ್ಪನವರು ತೀರಿಕೊಂಡ ನಂತರ ಅವರ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ಗೋವಿಂದಪ್ಪನವರ ಹೆಂಡತಿಗೆ ಖಾತೆ ಬದಲಾಣೆಯಾದ ಸರ್ವೇ ನಂಬರ್ 32/12ರಂತೆ ಪೋಡಿಆಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಅನಕ್ಷರಸ್ಥರು ಅವರಿಗೆ ಸಹಿ ಕೂಡ ಮಾಡಲು ಬರುವುದಿಲ್ಲ ಕೇವಲ ಹೆಬ್ಬೆಟ್ಟು ಹಾಕುತ್ತಾರೆ ಎಂದರೆ ಸರಿಯಲ್ಲ. ಖಾತೆ ಬದಲಾಯಿಸಿಕೊಂಡ ವಿಚಾರ ವಾದಿಗೆ 2013ರಲ್ಲಿ ಗೊತ್ತಾಗಿದೆ ಎಂದರೆ ಸರಿಯಲ್ಲ. 2013ರಲ್ಲಿ ವಾದಿ ಸ್ವಾಧೀನದಲ್ಲಿ ಇದ್ದ ಸ್ವತ್ತಿನ ಬಗ್ಗೆ ದಾಖಲೆಯನ್ನು ಸೃಷ್ಟಿಸಿದ ಕಾರಣ ವಾದಿ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಕಂದಾಯ ದಾಖಲೆಗಳನ್ನು ಸೃಷ್ಟಿಸಿದ ಕಾರಣ ವಾದಿ ರವರು ಎಸಿ ಕೋರ್ಟಿನಲ್ಲಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಅದು ನಮ್ಮ ಪರವಾಗಿದೆ ಎಂದು ನುಡಿಯುತ್ತಾರೆ. ಆದೇಶದಲ್ಲಿ ನಿಮಗೆ ಸೇರಿದೆ ಎಂದು

ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಆದೇಶವಾಗಿದೆ ಎಂದರೆ ಸರಿ. ಎಸಿ ನ್ಯಾಯಾಲಯದಲ್ಲಿ ನಾವು ತಕರಾರು ಹಾಕಿಲ್ಲ. ನಾವು ಆ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಪಿಡಿಂಗ್ ಇದೆ ಎಂದು ತಕರಾರು ಹಾಕಿದ ಕಾರಣ ಎಸಿ ನ್ಯಾಯಾಲಯದಲ್ಲಿ ತೀರ್ಮಾನ ಆಗಿಲ್ಲ ಎಂದರೆ ಸರಿಯಲ್ಲ.

ವಾದಿ ಸ್ವತ್ತಿನ ಪೂರ್ವ ದಿಕ್ಕಿಗೆ ಗೋವಿಂದಪ್ಪನವರಿಗೆ ಸೇರಿದ 27 ಗುಂಟೆ ಸ್ವತ್ತು ಇದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 32/2 ಮತ್ತು ಸರ್ವೇ ನಂಬರ್ 32/12 ಅಕ್ಕಪಕ್ಕದಲ್ಲಿ ಇದೆ ಎಂದರೆ ಸರಿ. ನಾನು ದಾವಾ ಅಸ್ತಿಯಲ್ಲಿ ಎಂದಿಗೂ ಸ್ವಾಧೀನದಲ್ಲಿ ಇಲ್ಲ ಸುಳ್ಳು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇದ್ದ ಬಗ್ಗೆ ದಾಖಲೆ ಇಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಯಾವ ದಾಖಲೆಗಳ ಆಧಾರದ ಮೇಲೆ ಕಂದಾಯ ದಾಖಲೆಗಳು ಬಂದಿರುತ್ತವೆ ಎಂದರೆ ಸಾಕ್ಷಿಯು ನನ್ನ ಅಜ್ಜಿ ತೀರಿಕೊಂಡತ ನಂತರ ನನ್ನ ತಾತನ ಹೆಸರಿಗೆ ಪೌತಿ ಖಾತೆ ಆಗಿದ ಅವರು ತೀರಿಕೊಂಡ ನಂತರ ಮೂಡಲಪ್ಪ ಮತ್ತು ತಿರುಮಳಪ್ಪನವರ ವಿಭಾಗ ಆಗಿ ಸರ್ವೇ ನಂಬರ್ 32/2ರ ಸ್ವತ್ತು ತಿಮರುಳಪ್ಪನವರಿಗೆ ಬಂದಿರುತ್ತದೆ.

ನನ್ನ ಅಜ್ಜಿ ಕಾಳಮ್ಮನವರು ಸರ್ವೇ ನಂಬರ್ 33ರಲ್ಲಿ 1 ಎಕರೆ, ಸರ್ವೇ ನಂಬರ್ 32ರಲ್ಲಿ 25 ಗುಂಟೆ 31ರಲ್ಲಿ 1 ಎಕರೆ 11ವರೆ ಗುಂಟೆ ಖರೀದಿಸಿರುತ್ತಾರೆ. ನನ್ನ ಅಜ್ಜಿ ಸರ್ವೇ ನಂಬರ್ 32ರಲ್ಲಿ 25 ಗುಂಟೆ ಹೊರತು ಬೇರೆ ಆಸ್ತಿ ಖರೀದಿಸಿಲ್ಲ ಎಂದರೆ 3 ಐಟಂ ಕೊಂಡುಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ಕಾಳಮ್ಮನವರು ಖರೀದಿಸಿರುವ ಬಗ್ಗೆ ದಾಖಲೆ

ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

ಡಿ.ಡಬ್ಲ್ಯೂ -1(ಟಿ ಕುಮಾರ್)